mfin powering responsible finance
MICROFINANCE INDUSTRY NETWORK

# Do's and Don'ts for Microfinance Field Officers

# ಮೈಕ್ರೋಫೈನಾನ್ಸ್ ಕ್ಷೇತ್ರಾಧಿಕಾರಿಗಳಿಗಾಗಿ ಮಾಡಬೇಕಾದವುಗಳು ಮತ್ತು ಮಾಡಬಾರದವುಗಳು

ಮೈಕ್ರೋಫೈನಾನ್ಸ್ ಕಾರ್ಯಾಚರಣೆಗಳು ಜವಾಬ್ದಾರಿಯುತ ಸಾಲ ವಿತರಣೆಯ, ಪಾರದರ್ಶಕತೆಯ, ನ್ಯಾಯಸಮ್ಮತ ನಡೆ-ನುಡಿಗಳ ಮತ್ತು ಗ್ರಾಹಕರ ಘನತೆಗೆ ಗೌರವದ ತತ್ವಗಳ ಮೇಲೆ ಆಧಾರಿತವಾಗಿವೆ. ಸಾಲಗಾರರೊಂದಿಗೆ ಮೊದಲು ಸಂಪರ್ಕ ಹೊಂದುವ ಶಾಖಾ ಸಿಬ್ಬಂದಿ ಈ ತತ್ವಗಳನ್ನು ದೈನಂದಿನ ಕಾರ್ಯಾಚರಣೆಯಲ್ಲಿ ಅನುಷ್ಠಾನಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ. ಅವರ ನಡೆ ಮತ್ತು ನಿರ್ಧಾರಗಳು ಗ್ರಾಹಕರ ನಂಬಿಕೆ, ನಿಯಂತ್ರಕ ಅನುಸರಣೆ ಹಾಗೂ ಸಂಸ್ಥೆಯ ಮತ್ತು ವಲಯದ ಒಟ್ಟಾರೆ ಪ್ರತಿಷ್ಠೆಯ ಮೇಲೆ ನೇರವಾಗಿ ಪರಿಣಾಮ ಬೀರುತ್ತವೆ.

ಈ ಹಿನ್ನೆಲೆಯಲ್ಲಿ, ಈ ದಸ್ತಾವೇಜು ಶಾಖಾ ಸಿಬ್ಬಂದಿಗೆ ನೈತಿಕ ವರ್ತನೆ, ಕಾರ್ಯಾಚರಣಾ ಶಿಸ್ತು ಮತ್ತು ಗ್ರಾಹಕಕೇಂದ್ರಿತ ಅಭ್ಯಾಸಗಳನ್ನು ಸಾಲ ಪ್ರಕ್ರಿಯೆಯ ಪ್ರತಿಯೊಂದು ಹಂತದಲ್ಲೂ ಬಲಪಡಿಸಲು ಮಾಡಬೇಕಾದ ಮತ್ತು ಮಾಡಬಾರದ ವಿಷಯಗಳನ್ನು ವಿವರಿಸುತ್ತದೆ. ಈ ಮಾರ್ಗಸೂಚಿಯು, ಏಕರೂಪದ ನಡವಳಿಕೆಯ ಮಾನದಂಡಗಳನ್ನು ಉತ್ತೇಜಿಸುವ, ಸಾಲಗಾರರ ಹಿತಾಸಕ್ತಿಯನ್ನು ರಕ್ಷಿಸುವ ಮತ್ತು ಜವಾಬ್ದಾರಿಯುತ ಮೈಕ್ರೋಫೈನಾನ್ಸ್ ಕಾರ್ಯಾಚರಣೆಗಳನ್ನು ಬಲಪಡಿಸುವ ಉದ್ದೇಶವನ್ನು ಹೊಂದಿದೆ.

## ಸಾಲ ಪ್ರಕ್ರಿಯೆ: ಹಂತ-ಹಂತವಾಗಿ ಮಾಡಬೇಕಾದವುಗಳು ಮತ್ತು ಮಾಡಬಾರದವುಗಳು

| ಮಾಡಬೇಕಾದವುಗಳು | ಮಾಡಬಾರದವುಗಳು |
|---|---|
| **A. ಗ್ರಾಹಕರೊಂದಿಗಿನ ಪ್ರಾರಂಭಿಕ ಸಭೆಗಳು – CGT, GRT, ಗುಂಪು ರಚನೆ, ಕ್ರೆಡಿಟ್ ಬ್ಯೂರೋ ಪರಿಶೀಲನೆ ಇತ್ಯಾದಿ** | |
| 1. ಸಾಲ ಪ್ರಕ್ರಿಯೆ ಆರಂಭಿಸುವ ಮೊದಲು ಸಾಲಗಾರರ ಒಪ್ಪಿಗೆ ಮತ್ತು ಅರಿವುಗಳನ್ನು ಖಚಿತಪಡಿಸಿಕೊಳ್ಳಿ | 1. ಸರಿಯಾದ ದೃಢೀಕರಣವಿಲ್ಲದೆ ಸಾಲಗಾರರಿಗೆ ಎಲ್ಲವೂ ಅರ್ಥವಾಗಿದೆ ಎಂದು ಊಹಿಸಬೇಡಿ. |
| 2. ಅರ್ಹತಾ ಮಾನದಂಡಗಳು, ಮೌಲ್ಯಮಾಪನ ಮತ್ತು ಸಾಲ ಪ್ರಕ್ರಿಯೆಯ ಬಗ್ಗೆ ಪಾರದರ್ಶಕತೆ ಕಾಪಾಡಿಕೊಳ್ಳಿ | 2. ಗುಂಪಿಗೆ ಸೇರಲು ಸಾಲಗಾರರ ಮೇಲೆ ಪ್ರಭಾವ ಬೀರಬೇಡಿ ಅಥವಾ ಒತ್ತಡ ಹೇರಬೇಡಿ. |
| 3. ಸಾಲ ಮರುಪಾವತಿ ಶಿಸ್ತು, ಜವಾಬ್ದಾರಿಯುತ ಸಾಲ ಪಡೆಯುವಿಕೆ ಹಾಗೂ ಸಾಲ ಮರುಪಾವತಿ ಮಾಡದಿದ್ದರೆ ಅಥವಾ ಕಂತು ಪಾವತಿಸದಿದ್ದರೆ ಉಂಟಾಗುವ ಪರಿಣಾಮಗಳ ಬಗ್ಗೆ ಗ್ರಾಹಕರಿಗೆ ತಿಳುವಳಿಕೆ ನೀಡಿ. | 3. ಹೊಸ ಗ್ರಾಹಕರ ನೋಂದಣಿ ಅಥವಾ ಸಾಲ ವಿತರಣೆಗೆ ಸಂಬಂಧಿಸಿದ ನಿರ್ಧಾರಗಳಲ್ಲಿ ರಿಂಗ್ ಲೀಡರ್‌ಗಳು ಅಥವಾ ಸೆಂಟರ್ ಲೀಡರ್‌ಗಳ ಮೇಲೆ ಅವಲಂಬಿಸಬೇಡಿ ಅಥವಾ ಅವರನ್ನು ತೊಡಗಿಸಿಕೊಳ್ಳಬೇಡಿ |
| 4. ಸಾಲದ ಷರತ್ತುಗಳು, ಮೊತ್ತ, ಬಡ್ಡಿದರ, ವಿಮೆಯ ಕಂತು ಮತ್ತು ಅದರ ವ್ಯಾಪ್ತಿ ಹಾಗೂ ಉತ್ತಮ ಮರುಪಾವತಿ ಸಂಸ್ಕೃತಿಯಿಂದ ಒದಗುವ ಲಾಭಗಳ ಬಗ್ಗೆ ಸಾಲಗಾರರಿಗೆ ವಿವರಿಸಿ | 4. CGT/GRT ಅಥವಾ ಇತರ ತರಬೇತಿ ಕಾರ್ಯಕ್ರಮಗಳನ್ನು ಕೇವಲ ವಿಧಿವಿಧಾನವಾಗಿ ತ್ವರಿತವಾಗಿ ನಡೆಸಬೇಡಿ. |
| **B. ಸಾಲ ಮೌಲ್ಯಮಾಪನ, ಪರಿಶೀಲನೆ – ಅನುಮೋದನೆ (ಅಂಡರ್‌ರೈಟಿಂಗ್) ಮತ್ತು ವಿತರಣೆ** | |
| 5. ಕುಟುಂಬದಲ್ಲಿ ಆದಾಯಗಳಿಸುತ್ತಿರುವ ಎಲ್ಲಾ ಸದಸ್ಯರ ಮಾನ್ಯವಿರುವ KYCಯ ಸಂಗ್ರಹಣೆಯನ್ನು ಖಚಿತಪಡಿಸಿಕೊಳ್ಳಿ ಮತ್ತು ಅವರ ಕ್ರೆಡಿಟ್ ಬ್ಯೂರೋ (CB) ಪರಿಶೀಲನೆ ನಡೆಸಿ. | 5. ಮೂಲ ದಾಖಲೆಯನ್ನು ಪರಿಶೀಲಿಸದೆ KYC ದಾಖಲೆಯನ್ನು ಸ್ವೀಕರಿಸಬೇಡಿ. KYC ಅನ್ನು ಬೇರೆ ಯಾವುದೇ ಉದ್ದೇಶಕ್ಕಾಗಿ ದುರುಪಯೋಗವಾಗದಂತೆ ಖಚಿತಪಡಿಸಿಕೊಳ್ಳಿ |
| 6. ಸಂಸ್ಥೆಯ ನೀತಿಯ ಪ್ರಕಾರ ಪ್ರತಿಯೊಬ್ಬ ಸದಸ್ಯರ ಮನೆಗೆ ಭೇಟಿ ನೀಡಿ ಕುಟುಂಬದ ಆದಾಯ ಮೌಲ್ಯಮಾಪನ ಮಾಡಿ. ಮರುಪಾವತಿ ಸಾಮರ್ಥ್ಯವನ್ನು ವಸ್ತುನಿಷ್ಠವಾಗಿ ಮೌಲ್ಯಮಾಪನ ಮಾಡಿ ಮತ್ತು ನೀವು ಗುರುತಿಸಿರುವ ಅಂಶಗಳನ್ನು ನಿಖರವಾಗಿ ದಾಖಲಿಸಿ. | 6. ಅರ್ಹತಾ ಮಾನದಂಡಗಳಿಗೆ ಹೊಂದಿಸಲು ಕುಟುಂಬದ ಆದಾಯದ ಮಾಹಿತಿಯನ್ನು ತಿದ್ದಬೇಡಿ / ತಪ್ಪಾಗಿ ತೋರಿಸಬೇಡಿ ಮತ್ತು ಕೇವಲ ಮಾತಿನ ದೃಢೀಕರಣದ ಮೇಲೆ ಅವಲಂಬಿಸಬೇಡಿ. |
| 7. ಸಂಸ್ಥೆಯ ನೀತಿಯ ಪ್ರಕಾರ ಸಾಲಗಾರರು ಸಾಲದ ಮಾಹಿತಿಹೊಂದಿದ ಕಾರ್ಡ್ ಮತ್ತು ಸಾಲಕ್ಕೆ ಸಂಬಂಧಿಸಿದ ಇತರೆ ದಾಖಲೆಗಳನ್ನು ಪಡೆಯುತ್ತಾರೆ ಎಂದು ಖಚಿತಪಡಿಸಿಕೊಳ್ಳಿ. | 7. ಅಪೂರ್ಣ ದಾಖಲೆಗಳೊಂದಿಗೆ ಸಾಲ ಪ್ರಕ್ರಿಯೆ ಮುಂದುವರಿಸಬೇಡಿ. |
| 8. ವಿತರಿಸಲಾದ ನಿವ್ವಳ ಮೊತ್ತ, ಕಡಿತಗೊಂಡ ಮೊತ್ತ ಹಾಗೂ ಇತರೆ ಸಾಲದ ನಿಯಮಗಳು ಮತ್ತು ಷರತ್ತುಗಳ ಪಾರದರ್ಶಕ ಸಂವಹನವನ್ನು ಖಚಿತಪಡಿಸಿಕೊಳ್ಳಿ. | 8. ಸಾಲಕ್ಕೆ ತಗಲಬಹುದಾದ ವೆಚ್ಚ ಮತ್ತು ಇತರೆ ನಿಯಮಗಳು ಹಾಗು ಷರತ್ತುಗಳ ಬಗ್ಗೆ ಅಪೂರ್ಣ ಅಥವಾ ತಪ್ಪು ಮಾಹಿತಿ ನೀಡಬೇಡಿ. |
| 9. ಸಾಲವನ್ನು ಕಟ್ಟುನಿಟ್ಟಾಗಿ ಗ್ರಾಹಕರ ಸ್ವಂತ ಖಾತೆಯಲ್ಲಿಯೇ ಅವರ ಸ್ವಂತ ಉಪಯೋಗಕ್ಕಾಗಿಯೇ ಪಡೆಯಲಾಗಿದೆ ಮತ್ತು ಸಾಲವನ್ನು ಇತರ ವ್ಯಕ್ತಿಯೊಂದಿಗೆ ಹಂಚಿಕೊಂಡಿಲ್ಲ ಅಥವಾ ವರ್ಗಾಯಿಸಲಾಗಿಲ್ಲ ಎಂದು ಖಚಿತಪಡಿಸಿಕೊಳ್ಳಿ. | 9. ಸಾಲಗಾರರಿಂದ ಖಾಲಿ ನಮೂನೆಗಳ ಮೇಲೆ ಸಹಿಗಳನ್ನು ಪಡೆಯಬೇಡಿ. |

Do's and Don'ts for Microfinance Field Officers

# ಮೈಕ್ರೋಫೈನಾನ್ಸ್ ಕ್ಷೇತ್ರಾಧಿಕಾರಿಗಳಿಗಾಗಿ ಮಾಡಬೇಕಾದವುಗಳು ಮತ್ತು ಮಾಡಬಾರದವುಗಳು

| ಮಾಡಬೇಕಾದವುಗಳು | ಮಾಡಬಾರದವುಗಳು |
|---|---|
| **C. ಸಾಲ ವಸೂಲಿ** | |
| **10.** ಪೂರ್ವನಿಗದಿತ ಹಾಗೂ ತಿಳಿಸಲಾದ ವೇಳಾಪಟ್ಟಿಯ ಪ್ರಕಾರ ಗೊತ್ತುಪಡಿಸಿದ ಹಾಗೂ ಸೂಕ್ತ ಸ್ಥಳದಲ್ಲಿ ಕೇಂದ್ರ ಸಭೆಗಳನ್ನು ನಡೆಸಿ. | **10.** ಸಂಸ್ಥೆಯ ನೀತಿಗೆ ವಿರುದ್ಧವಾಗಿ ಅನಿಯಮಿತ ಅಥವಾ ಸೂಕ್ತವಲ್ಲದ ಸಮಯದಲ್ಲಿ ಸಾಲಗಾರರಿಗೆ ಕರೆ ಮಾಡಬೇಡಿ / ಮರುಪಾವತಿಯನ್ನು ಸಂಗ್ರಹಿಸಬೇಡಿ. |
| **11.** ಕಂಪನಿಯ ಮಾರ್ಗಸೂಚಿಗಳ ಪ್ರಕಾರ ನಿಗದಿತ ಅಥವಾ ಗೊತ್ತುಪಡಿಸಿದ ಸ್ಥಳಗಳಲ್ಲಿ ಮಾತ್ರ ಮರುಪಾವತಿಗಳನ್ನು ಸಂಗ್ರಹಿಸಬೇಕು. | **11.** ಸಾಲಗಾರರ ಕೆಲಸದ ಸ್ಥಳಗಳಲ್ಲಿ, ಯಾವುದೇ ಸಾರ್ವಜನಿಕ ಸ್ಥಳಗಳಲ್ಲಿ ಅಥವಾ ಕಂಪನಿಯ ನೀತಿಯನ್ನು ಉಲ್ಲಂಘಿಸಿ ಯಾವುದೇ ಇತರ ಸ್ಥಳಗಳಲ್ಲಿ ಮರುಪಾವತಿಯನ್ನು ಸಂಗ್ರಹಿಸಬೇಡಿ. ಸಾಲಗಾರರು ಕೇಳಿದರೂ ಸಹ, ತಡರಾತ್ರಿಯಲ್ಲಿ ಸಂಗ್ರಹಣೆಯನ್ನು ತಪ್ಪಿಸಿ. |
| **12.** ಸಾಲ ಮರುಪಾವತಿ ವಸೂಲಾತಿಗೆ ರಶೀದಿಯನ್ನು ನೀಡಿ ಮತ್ತು ಸಂಸ್ಥೆಯ ನೀತಿಯ ಪ್ರಕಾರ ಸಾಲದ ಕಾರ್ಡ್‌ಗಳನ್ನು ನವೀಕರಿಸಿ / ಮರುಪಾವತಿ ನಮೂದಿಸಿ. | **12.** ಯಾವುದೇ ವಹಿವಾಟಿಗೆ ರಸೀದಿ ನೀಡುವುದನ್ನು ವಿಳಂಬ ಮಾಡಬೇಡಿ ಅಥವಾ ನಿರಾಕರಿಸಬೇಡಿ. |
| **13.** ಕೇಂದ್ರ ಸಭೆಗಳಲ್ಲಿ ಸರಿಯಾದ ಹಾಜರಾತಿಯನ್ನು ಖಚಿತಪಡಿಸಿಕೊಳ್ಳಿ ಮತ್ತು ಆರಂಭಿಕ ಒತ್ತಡ ಸೂಚಕಗಳು ಯಾವುದಾದರೂ ಇದ್ದರೆ ವರದಿ ಮಾಡಿ. | **13.** ಕೇಂದ್ರದ ಸಭೆಗಳಲ್ಲಿ ಹಾಜರಾತಿ ಅಥವಾ ಸಾಲದ ದಾಖಲೆಗಳಲ್ಲಿನ ಸಹಿಗಳನ್ನು ನಕಲಿ ಮಾಡಬೇಡಿ. |
| **14.** ಸಾಲಗಾರರು ಮತ್ತು ಅವರ ಕುಟುಂಬದ ಸದಸ್ಯರೊಂದಿಗೆ ಗೌರವಯುತ ಮತ್ತು ವೃತ್ತಿಪರ ಸಂವಹನವನ್ನು ಕಾಪಾಡಿಕೊಳ್ಳಿ. | **14.** ಬೆದರಿಸುವ ಅಥವಾ ಅವಮಾನಕಾರಿ ಭಾಷೆಯನ್ನು ಬಳಸಬೇಡಿ |
| **15.** ಸಾಲಗಾರರ ಘನತೆಯನ್ನು ಗೌರವಿಸಿ ಮತ್ತು ಆಹ್ಲಾದಕರ, ಸಭ್ಯ ಹಾಗು ಆಕ್ರಮಣಕಾರಿಯಲ್ಲದ ರೀತಿಯಲ್ಲಿ ಮಾತನಾಡಿ. | **15.** ಮರುಪಾವತಿ ಸಂಗ್ರಹಣೆಯ ಸಮಯದಲ್ಲಿ ಬಲವಂತ, ಬೆದರಿಕೆ ಅಥವಾ ಸಾರ್ವಜನಿಕ ಅವಮಾನವನ್ನು ಮಾಡಬೇಡಿ. |
| **16.** ವಸೂಲಿಗೆ ಸಂಬಂಧಿಸಿದಂತೆ ಸ್ಪಷ್ಟವಾದ ದಾಖಲೆಗಳನ್ನು (ರಿಜಿಸ್ಟರ್‌ಗಳು, ಫೈಲ್‌ಗಳು, ರಶೀದಿಗಳು, ಡಿಜಿಟಲ್ ಡೇಟಾಬೇಸ್‌ಗಳು ಇತ್ಯಾದಿ) ನಿರ್ವಹಿಸಿ. | **16.** ಯಾವುದೇ ಸಂದರ್ಭದಲ್ಲೂ ಸಾಲಗಾರರ ಆಸ್ತಿ ಅಥವಾ ವಸ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಡಿ. |
| **17.** ಸದಾ ಸಂಸ್ಥೆಯ ಗುರುತಿನ ಚೀಟಿ (ID card) ಧರಿಸಿ ಮತ್ತು ಸೂಕ್ತ ಉಡುಗೆಗಳನ್ನು ತೊಟ್ಟುಕೊಂಡಿರಿ . | **17.** ದುಃಖದ ಸಂದರ್ಭ, ಅನಾರೋಗ್ಯ ಅಥವಾ ಸಾಮಾಜಿಕ ಕಾರ್ಯಕ್ರಮಗಳಂಥಹ ಅನುಚಿತ ಸಮಯಗಳಲ್ಲಿ ಗ್ರಾಹಕರಿಗೆ ಕರೆ ಮಾಡಬೇಡಿ. |
| **18.** ನಿಮ್ಮ ಪ್ರದೇಶದಲ್ಲಿ ಮೈಕ್ರೋಫೈನಾನ್ಸ್ ಕಾರ್ಯಾಚರಣೆಗಳ ಮೇಲೆ ಪರಿಣಾಮ ಬೀರುವ ಯಾವುದೇ ಅನಿಯಮಿತ ಚಟುವಟಿಕೆ/ವಂಚನೆ/ ಬಾಹ್ಯ ಅಡಚಣೆಗಳು ಕಂಡುಬಂದರೆ ತಕ್ಷಣವೆ ನಿಮ್ಮ ಹಿರಿಯ ಅಧಿಕಾರಿಗಳಿಗೆ ತಿಳಿಸಿ. | **18.** ನಿಮ್ಮ ವೈಯಕ್ತಿಕ ಖಾತೆಯಲ್ಲಿ ಮರುಪಾವತಿ ಮೊತ್ತವನ್ನು ಸಂಗ್ರಹಿಸಬೇಡಿ ಮತ್ತು ಯಾವುದೇ ವೈಯಕ್ತಿಕ, ಹಣಕಾಸು ಅಥವಾ ಸಾಮಾಜಿಕ ವಹಿವಾಟಿನಲ್ಲಿ ಗ್ರಾಹಕರೊಂದಿಗೆ ತೊಡಗಿಸಿಕೊಳ್ಳಬೇಡಿ. |
| **19.** ಸಂಸ್ಥೆಯ ಸೂಚನೆಯಂತೆ ಶಾಖೆ, ಬ್ಯಾಂಕ್ ಅಥವಾ ಇತರೆ ಸ್ಥಳಗಳಲ್ಲಿ ತಡಮಾಡದೆ ಹಣವನ್ನು ಠೇವಣಿ ಮಾಡಿ | **19.** ಸಂಸ್ಥೆ ಸೂಚಿಸಿದ ಮಿತಿಯನ್ನು ಮೀರಿ ಹಣವನ್ನು ಸಾಗಿಸಬೇಡಿ ಏಕೆಂದರೆ ಇದು ಕಳ್ಳತನದ - ಹಣ ಕಸಿದುಕೊಳ್ಳುವ ಅಪಾಯವನ್ನುಂಟುಮಾಡಬಹುದು. |
| **D. ಇತರೆ** | |
| **20.** ಒಂದುವೇಳೆ ಸಂಸ್ಥೆಯ ಯಾವುದೇ ಇತರ ಉದ್ಯೋಗಿಯಿಂದ (ಗಳಿಂದ) ಸಂಸ್ಥೆಯ ಪ್ರಕ್ರಿಯೆಗಳ ದುರುಪಯೋಗ/ಉಲ್ಲಂಘನೆಯ ಪ್ರಕರಣ ನಿಮ್ಮ ಗಮನಕ್ಕೆ ಬಂದಲ್ಲಿ ನಿಮ್ಮ ಮೇಲ್ವಿಚಾರಕರು ಅಥವಾ ಪರಿಶೋಧನಾ ತಂಡಕ್ಕೆ ತಕ್ಷಣವೇ ತಿಳಿಸಿ. | **20.** ಇತರೆ ಉದ್ಯೋಗಿಗಳಿಂದ ಸಂಸ್ಥೆಯ ಪ್ರಕ್ರಿಯೆಗಳ ಯಾವುದೇ ಉಲ್ಲಂಘನೆಯಾದಲ್ಲಿ ನೀವು ಅದರ ಭಾಗವಾಗಬೇಡಿ ಮತ್ತು/ಅಥವಾ ಅದನ್ನು ನಿರ್ಲಕ್ಷಿಸಬೇಡಿ. |

ಸದಸ್ಯ ನಿಯಂತ್ರಿತ ಸಂಸ್ಥೆಗಳು ಈ ಮಾರ್ಗಸೂಚಿಯನ್ನು ಎಲ್ಲಾ ಕ್ಷೇತ್ರ ಕಾರ್ಯಕಾರಿಗಳಿಗೆ ತಲುಪಿಸುವುದನ್ನು ಹಾಗೂ ಇದನ್ನು ಆಂತರಿಕ ಪ್ರಮಾಣಿತ ಕಾರ್ಯಾಚರಣಾ ವಿಧಾನಗಳು ಮತ್ತು ಮೇಲ್ವಿಚಾರಣಾ ಚೌಕಟ್ಟುಗಳಲ್ಲಿ ಸಂಯೋಜಿಸುವುದನ್ನು ಖಚಿತಪಡಿಸಿಕೊಳ್ಳಲು ಸೂಚಿಸಲಾಗಿದೆ.

ಯಾವುದೇ ಸ್ಪಷ್ಟೀಕರಣಗಳಿಗಾಗಿ, ದಯವಿಟ್ಟು sro@mfinindia.org ಅನ್ನು ಸಂಪರ್ಕಿಸಿ.

**Microfinance Industry Network (MFIN)**
403 – 404, 409, 4th Floor, Emaar Palm Springs Plaza, Gurugram 122 003, Haryana, India

mfin_india | MicroFinance Industry Network | MicroFinance Industry Network (MFIN) | MFIN | www.mfinindia.org